# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಕೆಂಪೇಗೌಡನಗರ ಉಪವಿಭಾಗ,
ಬೃ.ಬೆಂ.ಮ.ಪಾಲಿಕೆ ಹೆಚ್. ಸಿದ್ದಯ್ಯ ರಸ್ತೆ, ಬೆಂಗಳೂರು

ಸಂಖ್ಯೆ:ಸ.ಇಂ/ವಾ-118/ವಾರ್ಡ್‌ಸಭೆ/2021-22 ದಿನಾಂಕ:05-02-2022

## ವಾರ್ಡ್ -118ರ ವಾರ್ಡ್ ಸಭೆಯ ನಡವಳಿ

ದಿನಾಂಕ:05-02-2022 ರಂದು ಕೆಂಪೇಗೌಡನಗರ ಉಪವಿಭಾಗ ವಾರ್ಡ್-118ರ ವಾರ್ಡ್ ಕಛೇರಿಯಲ್ಲಿ ಡಾ!!. ಚಂದ್ರಯ್ಯ.ಟಿ. ಉಪ ನಿರ್ದೇಶಕರು ಪಶುಪಾಲನೆ ವಾರ್ಡ್-118 ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.

ಹಾಜರಿದವರು:-

| ಕ್ರ ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಡಾ!!. ಚಂದ್ರಯ್ಯ.ಟಿ. | ನೋಡಲ್ ಅಧಿಕಾರಿಗಳು | 9902041310 |
| 2 | ಶ್ರೀ.ಕೆ.ಎಸ್.ವಿಜಯ್‌ಕುಮಾರ್ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:118 | 9480688118 |
| 3 | ಶ್ರೀಮತಿ. ಚಂದ್ರಕಾಂತ್ | ಸಹಾಯಕ ಕಂದಾಯ ಅಧಿಕಾರಿ | 9480684432 |
| 4 | ಡಾ!! ಹೆಚ್.ಸ್ವಾಮಿ | ಹೆಚ್.ಐ.ಓ | 8884224554 |
| 5 | ಡಾ!! ಅಶ್ವಿನಿ | ಆರೋಗ್ಯಾಧಿಕಾರಿ | 8762164340 |
| 6 | ಶ್ರೀ.ಆರ್.ವೀರಯ್ಯ | ಕಿರಿಯ ಆರೋಗ್ಯ ಪರಿವೀಕ್ಷಕರು | 9844859560 |
| 7 | ಮಹೇಶ್ | ಬೆಸ್ಕಾಂ ಕಿರಿಯ ಅಭಿಯಂತರರು | 9449840413 |
| 8 | ಶ್ರೀ.ಗೌತಮ್ | ಪಿ.ಎಸ್.ಐ ಎಸ್.ಆರ್.ನಗರ ಪೊಲೀಸ್ ಠಾಣೆ | 6361744397 |
| 9 | ಎಳುಮಲೈ | ಸ್ಥಳೀಯರು | 9886229208 |
| 10 | ಶ್ರೀ.ಜಾಕ್ | ವಿನೋಭನಗರ ಸ್ಥಳೀಯರು | 9741912926 |

ಮಾನ್ಯ ಅಧ್ಯಕ್ಷರು, ಮೇಲ್ಕಂಡ ಎಲ್ಲರನ್ನು ಸ್ವಾಗತದೊಂದಿಗೆ ಪರಸ್ಪರ ಪರಿಚಯ ಮಾಡಿಕೊಳ್ಳಲು ತಿಳಿಸುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು.

ಚರ್ಚಿಸಲಾದ ವಿಷಯಗಳು:-

1. ಕಾಮಗಾರಿ ಇಲಾಖೆ:-

ಕಾಮಗಾರಿ ವಿಷಯವಾಗಿ ಚರ್ಚಿಸಲಾಗಿ ಶ್ರೀ.ಎಳಮಲೈ ಮರಿಸ್ವಾಮಿ ಮಠ ಪಕ್ಕದಲ್ಲಿರುವ ಬೋರ್‌ವೆಲ್ ದುರಸ್ಥಿಯಾಗಿದ್ದು, ಇದನ್ನು ಸರಿಪಡಿಸುವಂತೆ ಸಭೆಯಲ್ಲಿ ಚರ್ಚಿಸಲಾಯಿತು. ಮುಂದುವರೆದು ಶ್ರೀ.ಜಾಕ್ ರವರು ಮಾತನಾಡಿ ವಿನೋಭನಗರದಲ್ಲಿ ಕಾಂಕ್ರೀಟ್‌ನಿಂದ ಮುಚ್ಚಿ ಹೋಗಿರುವ ಬೋರ್‌ವೆಲ್ ಅನ್ನು ತೆಗೆದು ದುರಸ್ಥಿಗೊಳಿಸಬೇಕೆಂದು ಸಭೆಯಲ್ಲಿ ಕೋರಿರುತ್ತಾರೆ.  ಹಾಗೂ ನಾಲಾ ರಸ್ತೆಯಲ್ಲಿ ರಸ್ತೆ ಮೂಲಭೂತ ಸೌಕರ್ಯ ರವರು ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ಬೋರ್‌ವೆಲ್ ಮುಚ್ಚು ಹಾಕಿರುವುದಾಗಿ ತಿಳಿಸಿರುತ್ತಾರೆ. ಎಸ್.ಆರ್.ನಗರ ಪೊಲೀಸ್ ಠಾಣೆಯವರು ಮತನಾಡಿ ಕೆ.ಎಸ್.ಗಾರ್ಡನ್‌ನಲ್ಲಿ ಸಿ.ಸಿ.ಕ್ಯಾಮೆರಾಗಳು ರಿಪೇರಿಯಾಗಿರುವುದನ್ನು ಸರಿಪಡಿಸಲು ತಿಳಿಸಿರುತ್ತಾರೆ.

ಮಾನ್ಯ ಮುಖ್ಯ ಆಯುಕ್ತರು ರವರ ಅದೇಶದಂತೆ 2021-22ನೇ ಸಾಲಿನ ಅನುಮೋದಿತ ಅಯವ್ಯಯದ ಕಾಮಗಾರಿಗಳನ್ನು ಕೈಗೆತ್ತುಕೊಳ್ಳುವ ಸಂಬಂಧ ವಾರ್ಡ್ ವ್ಯಾಪ್ತಿಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಈ ಕೆಳಗಿನಂತೆ ಅನುದಾನ ನೀಡಿದ್ದು, ಅಂದಾಜು ಪಟ್ಟಿ ತಯಾರಿಸುವ ಬಗ್ಗೆ ಸಭೆಗೆ ತಿಳಿಸಲಾಯಿತು.

| Sl.No | Name of Works | Amount in Lakhs |
|---|---|---|
| 1 | Maintenance of footpaths, drains & reasphalting of damaged roads in ward jurisdiction in ward no.118 Sudhamanagar | 20.00 |
| 2 | Annual Maintenance of borewells and water supply lines in ward no. 118 Sudhamanagar | 20.00 |
| 3 | Filling of potholes in ward jurisdiction in ward no. 118 Sudhamanagar | 20.00 |

2. ಘನತ್ಯಾಜ್ಯ ವಿಭಾಗ:-

ಘನತ್ಯಾಜ್ಯ ವಿಷಯವಾಗಿ ಶ್ರೀ.ಎಳುಮಲೈ ರವರು ಸಭೆಯಲ್ಲಿ ಮಾತನಾಡಿ ಎಂ.ಟಿ.ಬಿ.ರಸ್ತೆಯಲ್ಲಿ ಘನತ್ಯಾಜ್ಯ ವಿಭಾಗದಿಂದ ಕಸವನ್ನು ತೆಗೆದ ನಂತರ ಸ್ಥಳೀಯ ಅಂಗಡಿಯವರು ಕಸವನ್ನು ತಂದು ಹಾಕುತ್ತಿರುತ್ತಾರೆ ಎಂದು ತಿಳಿಸಿರುತ್ತಾರೆ. ಹಾಗೂ ಒಂದು ಆಟೋವನ್ನು ಕಸ ತೆಗೆಯಲು ನಿಯೋಜಿಸಬೇಕೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

3. ಆರೋಗ್ಯ ಇಲಾಖೆ

ಡಾ!!.ಅಶ್ವಿನಿರವರು ಮಾತನಾಡಿ, 18 ವರ್ಷ ವಯಸ್ಸು ಮೇಲ್ಪಟ್ಟರವರಿಗೆ Vaccanation ನೀಡಲಾಗುತ್ತಿದ್ದು ಎಂದು ತಿಳಿಸಿರುತ್ತಾರೆ. ವೈಎಂ.ಶಾಲ, ಸಿಮೆಂಟ್ಸ್ ಹೆಟ್ಸ್, ಫೈವರ್ಕ್ಸ್ ಕಾಲೋನಿ, ಹಾಗೂ ಮುನಿಯಪ್ಪ ಸಿಮೆಂಟ್ ಕಾಂಪೌಂಡ್ ರಲ್ಲಿರುವ ಶೌಚಾಲಯಗಳನ್ನು ಸ್ಥಳೀಯರು ಬೀಗ ಹಾಕುವುದನ್ನು ತೆಗೆಯಲಾಗಿರುತ್ತದೆ ಎಂದು ಸಭೆಯಲ್ಲಿ ಚರ್ಚಿಸಲಾಗಿರುತ್ತದೆ.

4. ಬಿ.ಡಬ್ಲೂ.ಎಸ್.ಎಸ್.ಬಿ ಇಲಾಖೆ

ವಿನೋಭನಗರ 3ನೇ ಅಡ್ಡರಸ್ತೆಯಲ್ಲಿ ಒಳಚರಂಡಿ ಸಂಪರ್ಕವನ್ನು ಬದಲಿಸಬೇಕೆಂದು ಶ್ರೀ. ಜಾಕ್ ರವರು ಕೋರಿರುತ್ತಾರೆ. ರಾಜಗೋಪಾಲ ಗಾರ್ಡನ್, ಪಾಪ್ಪಣ್ಣ ಗಾರ್ಡನನಲ್ಲಿನ ಒಳಚರಂಡಿ ಸಂಪರ್ಕವನ್ನು ಬದಲಿಸಬೇಕೆಂದು ಹಾಗೂ ಮ್ಯಾನ್‌ಹೋಲ್‌ಗಳನ್ನು ನಿರ್ಮಿಸಬೇಕೆಂದು ಶ್ರೀ.ಎಳಮಲೈ ರವರು ಸಭೆಯಲ್ಲಿ ಕೋರಿರುತ್ತಾರೆ

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಮುಂದಿನ ಸಭೆಗೆ ಕಡ್ಡಾಯವಾಗಿ ಎಲ್ಲಾ ಅಧಿಕಾರಿಗಳಿಗೆ ವಾರ್ಡ್ ಸಮಿತಿ ಸಭೆಗೆ ಸಮಯಕ್ಕೆ ಸರಿಯಾಗಿ ಹಾಜರಾಗುವಂತೆ ಸೂಚಿಸಿ, ತಪ್ಪಿದಲ್ಲಿ ಹಾಜರಾಗದ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಲು ತಿಳಿಸಿರುತ್ತಾರೆ. ಹಾಜರಿದ್ದ ಅಧಿಕಾರಿಗಳಿಗೆ ಸಮನ್ವಯ ಸಾಧಿಸಿಕೊಂಡು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಸಹಕಾರ ನೀಡುವಂತೆ ಕೋರುತ್ತಾ, ಸಭೆಗೆ ಹಾಜರಿದ್ದ ಎಲ್ಲಾರಿಗೂ ವಂದನೆಗಳನ್ನು ಅರ್ಪಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

5/2/22

ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ –118 ಸುಧಾಮನಗರ

5/2/22

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 118